ಕೇಳಲು ಹೋಗದೆ, ಕಾಫಿ ಬಿಸ್ಕತ್ ಇದ್ದ ಟ್ರೇ ಅವರ ಮುಂದಿಟ್ಟು, 'ತೆಗೆದುಕೊಳ್ಳಿ, ನನ್ನದು ಈಗಷ್ಟೇ ಆಯಿತು' ಎಂದೆ. ಅತ್ತಕಡೆಯಿಂದ ಯಾವುದೇ ಪ್ರಶ್ನೆ ಬರುವ ಮೊದಲು. ಮರುಮಾತಾಡದೆ ಇಬ್ಬರೂ ಬಿಸ್ಕತ್‌ನೊಂದಿಗೆ ಕಾಫಿ ಕುಡಿದರು. 'ಸರಿ ಹೊರಡೋಣ್ವ' ಸುಭದ್ರಾ ನಕುಲನತ್ತ ನೋಡಿದಾಗ, 'ನಾನೂ ಹೊರಗೆ ಹೋಗುವುದಿತ್ತು, ನಡೀರಿ, ಕಾರಲ್ಲಿ ಡ್ರಾಪ್ ಮಾಡ್ತೀನಿ' ಎಂದೆ.

'ಅಂಕಲ್ ನನ್ನನ್ನು ಸರ್ಕಲ್ ಹತ್ರ ಇಳಿಸಿ, ನನ್ನ ಫ್ರೆಂಡ್ ಮನೆಗೆ ಹೋಗ್ಬೇಕು.' ನಕುಲ ಕೇಳಿದಾಗ ಸರಿಯೆಂದು ತಲೆಯಾಡಿಸಿ, ಅವನು ಸರ್ಕಲ್ ಬಳಿ ಇಳಿದ ಬಳಿಕ, 'ಸುಭದ್ರಾ, ನನ್ನನ್ನು ಕ್ಷಮಿಸು ನಿನ್ನ ಹತ್ರ ತುಂಬಾ ಮಾತಾಡೋದಿದೆ' ಎಂದು ಅವಳ ಉತ್ತರಕ್ಕೂ ಕಾಯದೆ ಕಾರನ್ನು ವಾಪಸ್ ಮನೆಯತ್ತ ನಡೆಸಿದೆ. ಅವಳ ಕಂಗಳು ಕೊಳದಂತಾಗಿತ್ತು. ಏನೊಂದೂ ಮಾತನಾಡದೆ ತಲೆ ತಗ್ಗಿಸಿಯೇ ಇದ್ದಳು. ಮನೆಗೆ ಬರುವುದನ್ನೇ ಕಾಯುತ್ತಿದ್ದವಳಂತೆ, ತಾನು ಮೊದಲು ಕುಳಿತಿದ್ದ ಸೋಫಾದಲ್ಲಿ ಕುಳಿತು ಒಮ್ಮೆಲೇ ಬಿಕ್ಕತೊಡಗಿದಳು. ಅವಳ ಪಕ್ಕಕ್ಕೆ ಕುಳಿತು ನನ್ನ ತಪ್ಪನ್ನು ಸಂಪೂರ್ಣವಾಗಿ ನಿವೇದಿಸಿಕೊಂಡಿದ್ದೆ. ನನ್ನ ಕಣ್ಣಳಿಂದಲೂ ಧಾರಾಕಾರವಾಗಿ ನೀರು ಹರಿಯುತ್ತಿತ್ತು.

'ನಾನೂ ತಪ್ಪು ಮಾಡಿಬಿಟ್ಟೆ. ನೀವು ಬರುವಿರಿ ಎಂದು ಕಾಯ್ತಾ ಇದ್ದೆ, ನೀವು ಬರಲೇ ಇಲ್ಲ. ಎರಡು ವರ್ಷ ಕಾದಿದ್ರೆ ಹೇಗಾದ್ರು ಸಿಟಿ ಕಡೆ ಬರಬಹುದು ಎಂಬ ಲೆಕ್ಕಾಚಾರವಿತ್ತು. ನಿಮಗೆ ಹೇಗಾದರೂ ಕನ್ವಿನ್ಸ್ ಮಾಡಬಹುದು ಅನ್ನುವ ನಂಬಿಕೆ ಇತ್ತು.'

'ಇಲ್ಲ ಸುಭದ್ರಾ, ನಾನೂ ದುಡುಕಿದ್ದೆ. ತಾಯಿ ಮಗು ಸಂಬಂಧಕ್ಕೆ ಶಾಶ್ವತವಾಗಿ ಬೀಗ ಹಾಕ್ಬಿಟ್ಟೆ, ಈಗ ನೆನೆದರೆ ಎಷ್ಟು ಪೈಶಾಚಿಕವಾಗಿ ವರ್ತಿಸಿದೆ ಅನ್ನುತ್ತೆ.' ದನಿಯಲ್ಲಿ ಪಸೆಯಿತ್ತು.

'ಮನೆಯ ಕಷ್ಟಕ್ಕೆ, ನನ್ನ ಸಹಾಯಕ್ಕೆ, ಆ ಕೆಲಸ ವರವಾಗಿ ಬಂದಿತ್ತು. ಅದೇ ಶಾಪವಾಗಿ ಮುಳುವಾಯ್ತು... ಸುಂದರ ಸಂಸಾರವನ್ನು ನನ್ನ ಕೈಯಾರೆ ನಾನೇ ಹಾಳುಮಾಡಿಕೊಂಡೆ ಅಂತ ಅನಂತರದ ದಿನಗಳಲ್ಲಿ ಅನ್ನಿಸಿತು.'

